

ಶ್ರೀದೇವಿ ಕಾಯಂಬಾಡಿ
ಕಲೆ: ರೂಪಶ್ರೀ ಕಲ್ಲಿಗನೂರು



# ಹೆದ್ದಾರಿ

ಉರುಳುರುಳುತಿವೆ ಗಾಲಿಗಳು
ಬೆನ್ನುಬಿಡದೆ ಒಂದರ ಹಿಂದೆ
ಬಿಡದೇ ಅಟ್ಟಿಸಿಕೊಂಡು
ಯಾರು ಹಿಂದು ಯಾರು ಮುಂದು
ಬೀಸುತಿದೆ ಹವಾ ಭರೋಂ ಎಂದು
ಸುತ್ತುತಿದೆ ಗಿರ್ ಗಿರ್ ಸಿದ್ಧರಗುಡ್ಡ
ಚಾಚುತಿದೆ ಕಲ್ ಕಲರ್ ಕಾಗದದ ಹೂಮುಳ್ಳು
ಕೇಳಲಿ ಯಾರಲಿ ಯಾವುದು ಮುಂದಿನ ಊರು?

ಎಲ್ಲಿ ಸಾಲು ಮರಗಳ ನೆರಳಿನ ನೋಟ?
ಎಲ್ಲಿ ಮಾತಿಗೆ ಕೂತ ಮಂದಿಯ ಕೂಟ?
ಎಳನೀರ ಸವಿ ಮಾರುವ ಸಜ್ಜನ ತಾತ
ಸೊಪ್ಪುಕಾಯಿ ಹಸುಗೂಸುಹೊತ್ತ ಸಾಕವ್ವ
ಬೆನ್ನಿಗೆ ಬುಕ್ಕಿನ ಚೀಲ ಕೈಯಿಗೆ ಬುತ್ತಿಯ ಚೀಲ
ಕೈಕೈಹಿಡಿದ ಹೈಕಳು –ಎಲ್ಲಿ ಹೋದರು?
ಯಾವ ದಾರಿ ಹಿಡಿದರು?
ನೀವು ಕಂಡಿರೇ? ನೀವು ಕಂಡಿರೇ?

ರಸ್ತೆಯಂಚಿನಲ್ಲಿ ಪುಣ್ಯಕೋಟಿ
ಹುಡುಕುತಿದೆ ತನ್ನಆಡುಂಬೊಲ
ಮೇವಿನ ಜಾಡು ಹಸಿರುಹುಲ್ಲು
ಮೂಸುತಿದೆ ಅರಸುತಿದೆ
ಚಾರ್ಲಿ ಒಡೆಯನ ಮನೆಯ ಸುಳಿವು
ದಿಕ್ಕುತಪ್ಪಿದ ಹಸುಗೂಸಿನ ಹಾಗೆ
ದಿಕ್ಕರಿಯದ ಬಯಲೋ ಬಯಲು

ಮೇಲ್ಸೇತುವೆ ಮೇಲೆ ಮುಗಿಲು ಹಾಸಿದ ಸೂರು
ಬಿಡದೇ ಸುರಿಸುತಿದೆ ಬೆವರು ಬಿಸಿಲು ಭಾನು!
ಎಡಬಲ ರಸ್ತೆಗಳ ಸಾಲು ಸಾಲು
ಸಾಗುತ್ತಿರುವುದು ಎಲ್ಲಿಗೆ?ಎಲ್ಲಿಗೆ?

ಮೌನ ಮರಿಹಾಕಿದೆ ಏಸಿ ಗಾಡಿಯಲ್ಲಿ
ತಣ್ಣೀರು ಉಸಿರು ಬಿಗಿಹಿಡಿದಿದೆ ಬಾಟಲಿಯಲ್ಲಿ
ಹಾಡು ಮುಗಿಸಿ ವಿರಮಿಸಿದೆ ರೇಡಿಯೋ
ದಾರಿ ತೋರುತಿರುವವನು ಗೂಗಲ್ ಅಂಕಲ್
ತಿರುಗಿರಿ ಈಗ ಎಡಈಗ ಬಲ, ನೇರ ಸಾಗಿರಿ
ಇದೇ ನಿಮ್ಮ ಗಮ್ಯ ಸ್ಥಾನ!
ಎಲ್ಲಿ ಬಂದು ನಿಂತೆವು ನಾವು?!
ಎಲ್ಲಿಗೆ ತಲುಪಿ ನಿಂತೆವು ನಾವು?!

